ತ್ತದೆ. ಅಲ್ಲಿರತಕ್ಕ ವಿಲೇಜ್ ಅಕೌಂಟೆಂಟೋ ಅಥವಾ ಇನ್ನೊಬ್ಬನೋ ಆ ಸ್ಥಳಕ್ಕೆ ಹೋಗದೆ ಕೂತಲ್ಲೇ ಬಾಯಿಗೆ ಬಂದದ್ದು ಏನೋ ಬರೆದಿರುತ್ತಾರೆ ಅದನ್ನು ನಾವು ಈ ವಿಧಾನ ಸೌಧದಲ್ಲಿ ಕೂತುಕೊಂಡು ತೀರ್ಮಾನ ಮಾಡುವುದು ಸರಿಯಲ್ಲ. ಅನೇಕ ಅಧಿಕಾರಿಗಳು ತಪ್ಪು ಮಾಡಿದ್ದಾರೆ. ಮಲೆನಾಡಿನಲ್ಲಿ ಸಾವಿರಾರು ಕೆರೆಗಳಿವೆ. ಬಯಲು ಸೀಮೆಯಲ್ಲಿ ಕಡಿಮೆ ಇರಬಹುದು. ಇದರ ಬಗ್ಗೆ ನಾವು ಅನಿವಾರ್ಯವಾದ ಸ್ಥಿತಿಗತಿಗಳನ್ನು ನಾವು ತೀರ್ಮಾನ ಮಾಡಬೇಕಾಗಿದೆ. ಮಾನ್ಯ ದೇವೆಗೌಡರು, ನಾನು ಮತ್ತು ನೀವೂ ಇಲ್ಲಿ ಕೂತು ತೀರ್ಮಾನ ಮಾಡತಕ್ಕ ವಿಚಾರ ಇದಲ್ಲ.

ಶ್ರೀ ಕೆ. ಹೆಚ್. ಹನುಮೇಗೌಡ —ಸ್ವಾಮಿ, ತಾವು ಆಗಾಗ್ಗೆ ಟೂರ್ ಹೋಗುತ್ತಾ ಇರುತ್ತೀರಿ. ಯಾವುದಾದರೂ ಒಂದು ಹಳ್ಳಿಯ ಹತ್ತಿರ ೧೦-೨೦ ಎಕರೆ ಅಚ್ಚುಕಟ್ಟು ಇರತಕ್ಕ ರೈತರನ್ನು ಕರೆದು ಅಲ್ಲಿ ನೀವು ಹೋಗಿ ಇನ್‌ಸ್ಪೆಕ್ಷನ್ ಮಾಡಿದ್ದೀರಾ ? ಅಥವಾ ಇಲ್ಲಿ ಜಾಯಿಂಟ್ ಇನ್‌ಸ್ಪೆಕ್ಷನ್ ನಡೆದಿದೆಯೇ ? ಎಂದು ಅವರನ್ನು ಕೇಳಿದ್ದೀರಾ ? ಕಳೆದ ೭-೮ ವರ್ಷಗಳಲ್ಲಿ ಎಷ್ಟು ಸಾರಿ ಈ ರೀತಿ ಜಾಯಿಂಟ್ ಇನ್‌ಸ್ಪೆಕ್ಷನ್ ನಡೆದಿವೆ ಎಂಬುದನ್ನು ತಾವು ಹೇಳುತ್ತೀರಾ ?

ಶ್ರೀ ಎಸ್. ಬಂಗಾರಪ್ಪ.—ನೀವು ಹೇಳುವುದಕ್ಕಿಂತ ಮುಂಚೆ ನಾನೇ ಎಲ್ಲ ವಿಚಾರಗಳನ್ನೂ ಸ್ಪಷ್ಟವಾಗಿ ಹೇಳಿದ್ದೇನೆ. ನಾನು ಟೂರ್ ಹೋಗಿದ್ದಾಗ ಒಂದೆರಡು ಕೆರೆಗಳನ್ನು ಮಾತ್ರ ಪರಿಶೀಲಿಸಿದ್ದೇನೆ. ನಾನು ಈಗಾಗಲೇ ಹೇಳಿದಂತೆ ಈ ವಿಚಾರವನ್ನು ಪರಿಶೀಲನೆ ಮಾಡುತ್ತೇವೆ.

Number of Colleges under the Jurisdiction of Bangalore University,

163. SRI M. GANGANNA (Kushtagi).—Will the Minister for Education be pleased to state:—

(a) the number of colleges affiliated to fhe Bangaiore University;

(b) the total amount of Scholarship and Freeships sanctioned to the Boys and Girls studying in Pre-Degree, Degree Classes during the year 1977-78. out of that, the amount given to the Sheshadripuram college;

(c) [on what] the basis on which the Scholarships and Freeships have been sanctioned;

(d) whether it has come to the notice of the Government that some students of Sheshadripuram College have not securred the Scholarship and Freeships even though they are eligible, as per Havanur Report;

(e) if so, the action proposed to be taken by the Government in the matter ?

SRI G.B. SHANKAR RAO (Minister for Education).—

(a) 94, out of this 58 are evening and Law Colleges.

(b) During the year 1977-78 Rs. 19,00,000 for scholarship and Rs: 1,35,00,000 for Freeship have been sanctioned. Out of that Rs. 14,037 for Scholarship and Rs. 39,798 for Freeship have been given to the Sheshadripuram College.

(c) Scholarships and Freeships are being sanctioned on the basis of poverty and eligibility on the recommendations of the Principals of each college and other concerned officers.

(d) Scholarships and Freeships are being sanctioned to eligible boys and girls by the Directorate of Backward Class and Minorities as per the Havanur Report.

(e) This question does not arise in view of reply given above.

ಶ್ರೀ ಎಂ. ಗಂಗಣ್ಣ.—ಮಾನ್ಯ ಅಧ್ಯಕ್ಷರೆ, ಮಾನ್ಯ ಸಚಿವರ ಉತ್ತರದಲ್ಲಿ ೯ಳಿ ಕಾಲೇಜುಗಳು ಬೆಂಗಳೂರು ವಿಶ್ವವಿದ್ಯಾನಿಲಯದ ಕಕ್ಷೆಯಲ್ಲಿ ಬರುತ್ತದೆ ಆದರಲ್ಲಿ ೫ರ ಸಂಜೆ ಕಾಲೇಜುಗಳು ಮತ್ತು ೩ನೂನು ಕಾಲೇಜುಗಳು ಎಂದು ತಿಳಿಸಿದ್ದಾರೆ. ಆದರೆ, ಆದರಲ್ಲಿ ಎಷ್ಟು ಸಂಜೆ ಕಾಲೇಜುಗಳಲ್ಲಿ ಲಾ ಕಾಲೇಜುಗಳು ಇವೆಯೆಂದು ಮಾನ್ಯ ಸಚಿವರು ತಿಳಿಸಬೇಕೆಂದು ಕೇಳಿಕೊಳ್ಳುತ್ತೇನೆ. ಮತ್ತೇ ಎರಡನೆಯದು ಪ್ರಾಚಾರ್ಯರು ಯಾರು ? ಅವರ ಶಿಫಾರಸ್ಸಿನ ಮೇಲೆ ವಿದ್ಯಾರ್ಥಿವೇತನವನ್ನು ಕೊಟ್ಟಿದ್ದೇವೆಂದು ಹೇಳಿದ್ದಾರೆ. ಆದ್ದರಿಂದ ಯಾವ ಪ್ರಾಚಾರ್ಯರು ಶಿಫಾರಸ್ಸು ಮಾಡಿದ್ದಾರೆ ? ಮತ್ತೆ ಇದಕ್ಕೆ ಸಂಬಂಧಪಟ್ಟ ಅಧಿಕಾರಿಗಳ. ಯಾರು ತಿಳಿಸಬೇಕು ?

† ಶ್ರೀ ಜಿ.ಬಿ. ಶಂಕರ್‌ರಾವ್.—ಸಂಜೆ ಕಾಲೇಜುಗಳು ಎಷ್ಟು ಮಂತ್ರು ಅಧಿಕಾರಿಗಳು ಯಾರು ಎನ್ನುವ ವಿವರಗಳು ನನ್ನಲ್ಲಿ ಸದ್ಯದಲ್ಲಿ ಇಲ್ಲ.

ಶ್ರೀ ಎಂ. ಗಂಗಣ್ಣ.—ಹಣ ಪಾವತಿ ಮಾಡಲಾಗಿದೆ ಎಂದು ತಿಳಿಸಿದ್ದಾರೆ. ಆದರೆ ಅದು ೭೭-೭೮ ರಂದು ಪಾವತಿಯಾಗಿದೆ, ಅದು ಈ ವರ್ಷದಲ್ಲಿ ; ಯಾರೂ ಅಲ್ಪಸಂಖ್ಯಾತರು ಇದ್ದಾರೆ, ಅವರಿಗೆ ಕೊಡಬೇಕಾದ ಹಣವನ್ನು ರೀ ಎಂಬರ್ಸ್‌ಮೆಂಟ್ ಮಾಡಬೇಕು, ಹಾಗೆ ಮಾಡದೆ ಫ್ರೀ ಷಿಪ್ ಮತ್ತು ಸ್ಕಾಲರ್‌ಷಿಪ್ ಕೊಡಲಾಗಿದೆ ಎಂದು ಪೇಪರ್‌ನಲ್ಲಿ ಕೊಡುತ್ತಾರೆ. ಆದರೆ, ಅದು ಸಂಬಂಧಪಟ್ಟ ಕಾಲೇಜುಗಳಿಗೆ ಮುಟ್ಟಿರುವುದಿಲ್ಲ, ಸಂಬಂಧಪಟ್ಟ ಕಾಲೇಜುಗಳಿಗೆ ತಲುಪಿದ ಮೇಲೆ ಬೇಕಾದರೆ ಪೇಪರ್‌ನಲ್ಲಿ ಕೊಡಲಿ. ಇಲ್ಲದೆ ಹೋದರೆ ವಿದ್ಯಾರ್ಥಿಗಳು ಕಾಲೇಜಿಗೆ ಮನೆಗೆ ಅಲೆಯಬೇಕಾಗುತ್ತದೆ?

ಶ್ರೀ ಜಿ.ಬಿ. ಶಂಕರ್‌ರಾವ್.—ಇದನ್ನು ಗಮನದಲ್ಲಿ ಇಟ್ಟುಕೊಳ್ಳುತ್ತೇವೆ.

ಶ್ರೀ ಎಂ. ಗಂಗಣ್ಣ.—ಈಗ ಎಕ್ಸಾಮಿನೇಷನ್ ಫೀ ಏನು ಮಾಫಿ ಮಾಡಿದ್ದಾರೆ. ಅವರೂ ಕೂಡ ಮಿನಿಮಮ್ ೨ ರೂಪಾಯಿ ಕೊಡಲೇ ಬೇಕಾಗುತ್ತದೆ. ಆ ಎರಡು ರೂಪಾಯಿಯನ್ನು ಏತಕ್ಕೆ ತೆಗೆಯು ಬಾರದು?

ಶ್ರೀ ಜಿ.ಬಿ. ಶಂಕರ್‌ರಾವ್.—ಇದು ಸಂಬಂಧಪಟ್ಟ ಕಾಗದ ಮತ್ತು ಇತರೆ ಖರ್ಚುಗಳಿಗೆ ಕೊಡ ಬೇಕಾಗುತ್ತದೆ.

Electrification to Villages in the State.

194 SRI PRABHAKAR TELKAR (Chitapur)—Will the Chief Minister be pleased to state.—

(a) the number of villages electrified in the State as at the end of 1977 (District wise particulars be furnished);

(b) the number of villages electrified in Gulbarga District as at the end of 1977 (Particulars of each Taluk with the total number of villages and number of villages electrified in each taluk be furnished);

(c) whether the Government is aware that there are several panchayats which are not providing bulbs to the street poles in the villages which have been electrified;

† Indicates that rem rks or speeches have not been revised by the member concerned.